UGD ಕಾಮಗಾರಿ

290 (476) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಶಿವಮೊಗ್ಗ ನಗರಸಭೆ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯುಜಿಡಿ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಅನುದಾನವೆಷ್ಟು; ಅಕ್ಟೋಬರ್ 2011 ರವರೆಗೆ ಆಗಿರುವ ಕಾಮಗಾರಿ ಭೌತಿಕ ಮತ್ತು ಆರ್ಥಿಕವೆಷ್ಟು (ವಾರ್ಡ್‌ವಾರು, ರಸ್ತೆವಾರು ವಿವರ ಒದಗಿಸುವುದು);

(ಆ) ಈ ಪೈಕಿ ಅಪೂರ್ಣಗೊಂಡ ಕಾಮಗಾರಿಗಳೆಷ್ಟು; ಗುತ್ತಿಗೆ ಕರಾರು ಅವಧಿ ಎಷ್ಟು ಗುತ್ತಿಗೆದಾರರುಗಳನ್ನು ಎಷ್ಟು ಬಾರಿ ಯಾವ ಎಸ್. ಆರ್. ದರದಲ್ಲಿ ಯಾವ ಕಾರಣಗಳಿಗಾಗಿ ಹೆಚ್ಚಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ;

(ಇ) ಕಾಮಗಾರಿಗಳು ಮುಗಿದ ನಂತರ ಯಾವ ರಸ್ತೆಗಳನ್ನು ಮೊದಲಿನಂತೆ ಡಾಂಬರೀಕರಣ ಮಾಡಿ ಗುಂಡಿ ಮುಚ್ಚಿಸಿ ಸುವ್ಯವಸ್ಥೆ ಮಾಡಲಾಗಿದೆ (ವಾರ್ಡ್‌ವಾರು ರಸ್ತೆವಾರು ವಿವರ ಒದಗಿಸುವುದು)?

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ಅ) ಶಿವಮೊಗ್ಗ ನಗರದ ಒಳಚರಂಡಿ ಯೋಜನೆಯ ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ಮತ್ತು ಅಕ್ಟೋಬರ್ 2011 ರವರೆಗಿನ ಆರ್ಥಿಕ ಮತ್ತು ಭೌತಿಕ ಪ್ರಗತಿ ಕೆಳಕಂಡಂತಿದೆ;

(ರೂ. ಲಕ್ಷಗಳಲ್ಲಿ)

ವಾರ್ಷಿಕವಾರು	ಯೋಜನೆಗೆ ಬಿಡುಗಡೆಯಾದ ಅನುದಾನ	ಯೋಜನೆಯ ಆರ್ಥಿಕ ಪ್ರಗತಿ	
		ಪ್ಯಾಕೇಜ್–1	ಪ್ಯಾಕೇಜ್–2
2009–10	2000.00	360.72	477.64

2010–11	2000.00	612.27	637.51
2011–12	1000.00	98.82	126.56
	5000.00	1071.81	1241.71

ಭೌತಿಕ ಪ್ರಗತಿ ಶೇ. 35 ರಷ್ಟು ಹಾಗೂ ಶೇ. 28 ರಷ್ಟು ಆರ್ಥಿಕ ಪ್ರಗತಿಯನ್ನು ಅಕ್ಟೋಬರ್ 2011ರ ಅಂತ್ಯದವರೆಗೆ ಆಗಿರುತ್ತದೆ. ಸದರಿ ಯೋಜನೆಯಡಿಯಲ್ಲಿ ವಾರ್ಡ್‌ವಾರು ಹಣ ಹಂಚಿಕೆಯಾಗಿರುವುದಿಲ್ಲ.

(ಆ) ಗುತ್ತಿಗೆ ಕರಾರು ಅವಧಿ ದಿನಾಂಕ 19.03.2009 ರಿಂದ 18.3.2011 ರವರೆಗೆ ನಿಗಧಿಪಡಿಸಲಾಗಿತ್ತು. ಗುತ್ತಿಗೆದಾರರು ಇನ್ನೂ ಶೇ. 65ರಷ್ಟು ಕಾಮಗಾರಿಯನ್ನು ಪೂರ್ಣಗಳಿಸ ಬೇಕಾಗಿದೆ.

ಶಿವಮೊಗ್ಗ ಒಳಚರಂಡಿ ಯೋಜನೆಯ ಅಂದಾಜು ರೂ. 6180 ಲಕ್ಷಗಳಿಗೆ 2007–08ರ ದರಪಟ್ಟಿಯ ಆಧಾರದ ಮೇಲೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದೆ. ಮೆ॥ ಜಿವಿಪಿಆರ್ ಇಂಜಿನಿಯರ್ಸ್ ಲಿ., ಹೈದರಾಬಾದ್ ಇವರಿಗೆ ಸದರಿ ಕಾಮಗಾರಿಯ ಗುತ್ತಿಗೆಯನ್ನು ಕರಾರು ಸಂಖ್ಯೆ: 15&16 ದಿನಾಂಕ 19.03.2009ರಲ್ಲಿ ಎರಡೂ ಪ್ಯಾಕೇಜ್‌ಗಳನ್ನು ನೀಡಲಾಗಿದೆ. ಗುತ್ತಿಗೆಯ ಮೊತ್ತ–ಪ್ಯಾಕೇಜ್–1 ರೂ. 36.60 ಕೋಟಿಗಳು, ಪ್ಯಾಕೇಜ್–2: ರೂ.44.02 ಕೋಟಿಗಳಾಗಿದ್ದು, 2008–09ರ ದರಪಟ್ಟಿಯ ಮೇಲೆ ಟೆಂಡರ್ ಪ್ರೀಮಿಯಂ ಶೇ–39ರಷ್ಟು ಇರುತ್ತದೆ.

ಕಾಮಗಾರಿ ಪ್ರಗತಿ ವಿಳಂಬವಾದ ಕಾರಣ ಗುತ್ತಿಗೆ ಕರಾರನ್ನು ಮಂಡಳಿಯ ನಡವಳಿಗಳ ದಿನಾಂಕ 21.5.2011ರಲ್ಲಿ ರದ್ದುಗೊಳಿಸಿ, ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು, ಭದ್ರತಾ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಂಡು, ಉಳಿದ ಕಾಮಗಾರಿಗಳನ್ನು ಗುತ್ತಿಗೆದಾರರ ಜವಾಬ್ದಾರಿ ಮತ್ತು ಹೊಣೆಗಾರಿಕೆಯಲ್ಲಿ **(Risk & Cost)** ಕೈಗೊಳ್ಳಲು ನಿರ್ಣಯಿಸಲಾಯಿತು. ಗುತ್ತಿಗೆದಾರರು ಇದನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ **Writ Petition No. 18221/2011** ದಲ್ಲಿ ಪ್ರಶ್ನಿಸಿದ್ದರಿಂದ ಮಾನ್ಯ ಉಚ್ಚ ನ್ಯಾಯಾಲಯವು ಈ ಆದೇಶವನ್ನು ತಡೆಹಿಡಿದು, ಆದೇಶ ದಿನಾಂಕ 21.6.2011ರಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಏಪ್ರಿಲ್ 2012ರ ಅಂತ್ಯದವರೆಗೆ ಕಾಲಾವಕಾಶ ನೀಡಲಾಗಿತ್ತು.

ಪುನಃ ಗುತ್ತಿಗೆದಾರರ ಭೌತಿಕ ಪ್ರಗತಿಯನ್ನು ಪ್ರತಿ ತಿಂಗಳು ಪರಿಶೀಲಿಸಿ ತೃಪ್ತಿಕರವಾಗಿಲ್ಲದಿದ್ದರಿಂದ, ನವೆಂಬರ್ 2011ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮಂಡಳಿಯಿಂದ ವರದಿಯನ್ನು ಸಲ್ಲಿಸಲಾಯಿತು. ಎಲ್ಲಾ ವಿವರಗಳನ್ನು ಪರಿಶೀಲಿಸಿದ ನಂತರ ಮಾನ್ಯ ಉಚ್ಚ ನ್ಯಾಯಾಲಯವು ಆದೇಶ ದಿನಾಂಕ 19.11.2011ರಲ್ಲಿ ಈ ಕೆಳಕಂಡಂತೆ ಆದೇಶ ನೀಡಿರುತ್ತದೆ;

1) ಶೇ.74 ರಷ್ಟು ಕಾಮಗಾರಿಯನ್ನು ಜನವರಿ 2012ರ ಅಂತ್ಯದೊಳಗೆ ಪೂರ್ಣಗೊಳಿಸಬೇಕು.

2) ಶೇ.90 ರಷ್ಟು ಕಾಮಗಾರಿಯನ್ನು ಮಾರ್ಚ್ 15, 2012ರ ಅಂತ್ಯದೊಳಗೆ ಪೂರ್ಣಗೊಳಿಸಬೇಕು.

3) ಶೇ. 100 ರಷ್ಟು ಕಾಮಗಾರಿಯನ್ನು ಏಪ್ರಿಲ್ 2012ರ ಅಂತ್ಯದೊಳಗೆ ಪೂರ್ಣಗೊಳಿಸಬೇಕು.

ಮಾನ್ಯ ಉಚ್ಚ ನ್ಯಾಯಾಲಯವು ನೀಡಿದ ಆದೇಶದಂತೆ, ನಿಗದಿತ ಸಮಯದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಗುತ್ತಿಗೆದಾರರು, ಈ ಎಲ್ಲಾ ಕಾಮಗಾರಿಗಳನ್ನು ಮಾನ್ಯ ಉಚ್ಚ ನ್ಯಾಯಾಲಯವು ತಿಳಿಸಿರುವ ಪ್ರಕಾರ ಪೂರ್ಣಗೊಳಿಸಲು ವಿಳಂಬವಾದಲ್ಲಿ, ಉಳಿಕೆ ಕಾಮಗಾರಿಯನ್ನು ಗುತ್ತಿಗೆದಾರರ ಜವಾಬ್ದಾರಿ ಮತ್ತು ಹೊಣೆಗಾರಿಕೆಯಲ್ಲಿ (Risk & Cost) ಕೈಗೊಂಡು ಪೂರ್ಣಗೊಳಿಸಲಾಗುವುದು.

(ಇ) ಕಾಮಗಾರಿ ಮುಗಿದ ನಂತರ ರಸ್ತೆಗಳನ್ನು ಪೂರ್ಣಸ್ಥಿತಿಗೆ ತರಲು ಅನುಮೋದನೆಯಾದ ಅಂದಾಜಿನಲ್ಲಿ ಅವಕಾಶ ಇರುತ್ತದೆ. ಈ ವಿಷಯದ ಬಗ್ಗೆ ಶಿವಮೊಗ್ಗ ನಗರಸಭೆಯೊಂದಿಗೆ ಚರ್ಚಿಸಿ ನಗರಸಭೆಯ ಸಹಮತಿಯಿಂದ ರಸ್ತೆಗಳ ದುರಸ್ತಿಗಾಗಿ ಅಂದಾಜಿನಲ್ಲಿ ಅವಕಾಶವಿರುವ ಮೊತ್ತ ರೂ. 1,00,96,990/-ಗಳನ್ನು ನಗರಸಭೆಯ ವತಿಯಿಂದ ರಸ್ತೆಗಳ ದುರಸ್ತಿ ಕೈಗೊಳ್ಳಲು ಜುಲೈ 2010ರಲ್ಲಿ ನಗರಸಭೆಗೆ ಪಾವತಿಸಲಾಗಿದೆ.

ರಸ್ತೆಗಳ ಅಭಿವೃದ್ಧಿ

291 (231) ಶ್ರೀ ಲಾಲಾಜಿ ಆರ್. ಮೆಂಡನ್(ಕಾಪು) ಮಾನ್ಯ ಲೋಕೋಪಯೋಗಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-